# 6

# ಬಾಧೆಗೊಳಗಾದ ಸೇವಕ

## (ಯೆಶಾಯ 53)

ಅಪೊಸ್ತಲರ ಕೃತ್ಯಗಳು 8ರಲ್ಲಿ, ಯೆರೂಸಲೇಮಿನಲ್ಲಿ ಆರಾಧನೆ ಮಾಡಿ, ರಥದ ಮೇಲೆ ಪ್ರಯಾಣಮಾಡಿ ಬರುತ್ತಿದ್ದ ಐಥಿಯೋಪಿಯದ ಐಶ್ವರ್ಯವಂತನನ್ನು ಸೌವಾರ್ತಿಕನಾದ ಫಿಲಿಪ್ಪನು ಸಂಧಿಸಿದ ದಾಖಲೆಯನ್ನು ಮಾಡಲಾಗಿದೆ. ಅವರು ಆರಾಧನೆಗಾಗಿ ಯೆರೂಸಲೇಮಿಗೆ ಹೋಗಿದ್ದರಿಂದ, ಬಹುಶಃ ಅವನು ಯುದಾಯ ಮತಕ್ಕೆ ಪರಿವರ್ತನೆಗೊಂಡಿರಬಹುದು. ಮತ್ತೊಂದು ಸಾಧ್ಯತೆ ಏನೆಂದರೆ, ಅವನು "ದೇವರ ಭಯ" ಉಳ್ಳವನಾಗಿದ್ದನು ಎಂಬ ಹೇಳಿಕೆಯಿಂದ, ಒಬ್ಬ ಅನ್ಯನು ಯೆಹೂದ್ಯರ ಮಂದಿರದ ಪ್ರಕಾರ ಯೆಹೂದ್ಯರು ದೇವರನ್ನು ಆರಾಧನೆ ಮಾಡುವವರಾಗಿದ್ದರೂ, ಅವರು ನಿಜವಾದ ಪರಿವರ್ತನೆಗೊಂಡವರಾಗಿರಲಿಲ್ಲ ಏಕೆಂದರೆ ಅವರು ಸುನ್ನತಿ ಹೊಂದಿರಲಿಲ್ಲ (ಅಪೊಸ್ತಲರ ಕೃತ್ಯಗಳು 10:1, 2; 13:26). ಆದರೆ ಆ ಸಮಯದಲ್ಲಿ ಅ ಅನ್ಯನು ಇಬ್ರಿಯರ ಪ್ರವಾದಿಯಾದ ಯೆಶಾಯ ಗ್ರಂಥವನ್ನು ಓದುತ್ತಿದ್ದನು ಅದು, ಆಶ್ಚರ್ಯವೇ. ಅವನು ಯೆಶಾಯ 53:7, 8ರ ಭಾಗವನ್ನು ಓದುತ್ತಿದ್ದನು.

> ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿ ಕೊಂಡನು,
> ಬಾಯಿ ತೆರೆಯಲಿಲ್ಲ;
> ಮಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ
> ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು,
> ಬಾಯಿ ತೆರೆಯಲೇ ಇಲ್ಲ.
> ಹಿಂಸೆಯ ನ್ಯಾಯದಿಂದ ಕೊಲ್ಲಲ್ಪಟ್ಟನು,
> ಆಹಾ, ಇವನು ಜೀವಲೋಕದಿಂದ ಕೀಳಲ್ಪಟ್ಟಿದ್ದಾನೆ,
> ನಮ್ಮ ಜನಗಳ ದ್ರೋಹಗಳ ದೆಸೆಯಿಂದ ಈ ಪೆಟ್ಟು ಅವನ ಮೇಲೆ ಬಿತ್ತಲ್ಲಾ ಎಂದು
> ಅವನ ಕಾಲದವರಲ್ಲಿ ಯಾರು ಮನಮುಟ್ಟಿ ಮರುಗಿದರು?

ಆಗ ಫಿಲಿಪ್ಪನು, ಐಥಿಯೋಪಿಯ ಮನುಷ್ಯನ ರಥದಲ್ಲಿ ಕೂತುಕೊಂಡು, ಅವನು ಓದುತ್ತಿದ್ದ ಅಂಶವನ್ನು ವಿವರಿಸಿದನು. ಆಗ ಅವನು "ಈ ಭಾಗವು ಪ್ರವಾದಿಯ ಕುರಿತಾಗಿಯೋ ಅಥವಾ ಬೇರೆಯವನ ಕುರಿತಾಗಿ ಬರೆಯಲ್ಪಟ್ಟಿದೆಯೇ?" ಎಂಬ ಪ್ರಶ್ನೆಯನ್ನು ಕೇಳಿದನು (ಅಪೊಸ್ತಲರ ಕೃತ್ಯಗಳು 8:34). ನಂತರ ಫಿಲಿಪ್ಪನು ಆ ವಾಕ್ಯ ಭಾಗವನ್ನು ವಿವರಿಸಿ: "ಯೇಸುವಿನ ಬಗ್ಗೆ ಪ್ರಸಂಗಿಸಿದನು" (ಅಪೊಸ್ತಲರ ಕೃತ್ಯಗಳು 8:35).

ಎಂಟು ನೂರು ವರ್ಷಗಳ ನಂತರದಲ್ಲಿ ಹುಟ್ಟಿದ ಯೇಸುವಿನ ಹಳೆ ಒಡಂಬಡಿಕೆಯ ಬಗ್ಗೆ ಪ್ರವಾದಿಯು ಬರೆಯಲು ಹೇಗೆ ಸಾಧ್ಯವಾಯಿತು? ಅವನು ಯೇಸುವಿನ ಹಾಗೂ ಆತನ ಮರಣದಬಗ್ಗೆ ಹೇಗೆ ಬರೆದನು? ಯೆಶಾಯ 53ರ ಪರಿಶೀಲನೆ ಅದನ್ನು ಸ್ಪಷ್ಟಪಡಿಸುತ್ತದೆ.

### ಪ್ರವಾದನೆಯ ನಿರ್ಮಾಣ

ದಾವೀದನು ಕಾಲವಾದ ನಂತರ ಇಸ್ರಾಯೇಲ್ಯರ ಸಿಂಹಾಸನಕ್ಕೆ ಸೊಲೋಮೋನನು ಬಾಧ್ಯನಾದನು (1 ಅರಸು 1; 2). ಈ ಅವಧಿಯಲ್ಲಿ ಇಸ್ರಾಯೇಲ್ಯರು ಬಹು ಆಶೀರ್ವಾದ ವನ್ನು ಹೊಂದಿ ಸಮೃದ್ಧಿಗೊಂಡರು. ಆದರೆ ಸೊಲೋಮೋನನ ವಿಗ್ರಹಗಳ ಪ್ರಭಾವಕ್ಕೆ

ತುತ್ತಾದ್ದರಿಂದ, ಅವನ ಆಡಳಿತದ ಅಂತ್ಯದ ಸಮಯದಲ್ಲಿ ವೈರಿಗಳು ಇಸ್ರಾಯೇಲ್ಯರಿಗೆ ತಿರಿಗಿ ಬಿದ್ದರು (1 ಅರಸು 11 ಅದಕ್ಕೆ ಉತ್ತೇಜನವನ್ನು ನೀಡಿದನು). ಸೊಲೋಮೋನನ ಮರಣದ ನಂತರ, ಅವನ ಮಗನಾದ ರೆಹಬಾಮನು ಸಿಂಹಾಸನ ಏರಿದನು, ಆದರೆ ಅವನು ವಿವೇಕ ರಹಿತನಾಗಿ, ತನ್ನ ರಾಜ್ಯದಲ್ಲಿನ ಗೊಂದಲಕ್ಕೆ ಒಳಗಾದನು. ಇದರ ನಿಮಿತ್ತ ರಾಜ್ಯವು ದಕ್ಷಿಣ ಹಾಗೂ ಉತ್ತರದ ರಾಜ್ಯ ವೆಂದು ಇಬ್ಬಾಗವಾಯಿತು, ಮತ್ತು ತಮ್ಮದೇ ಆದ ಅರಸರನ್ನು ಅವರು ಹೊಂದಿದರು. (ದಕ್ಷಿಣದ ರಾಜ್ಯ ಮಾತ್ರ ದಾವೀದನ ವಂಶಾವಳಿಯಲ್ಲಿ ಮುಂದುವರಿಯಿತು) ಉತ್ತರ ಪ್ರದೇಶವು "ಇಸ್ರೇಲ್" ಎಂಬುದಾಗಿಯೂ, ದಕ್ಷಿಣದ ಪ್ರಾಂತವು "ಯೆಹೂದ" ಎಂಬುದಾಗಿ ನಾಮಕರಣಗೊಂಡು. ಯೆಹೂದಕ್ಕೆ ಯೂದನ ಹಾಗೂ ಬೆನ್ಯಾಮಿನನ ಚಿಕ್ಕ ಕುಲವು ಮಾತ್ರ ಸೇರ್ಪಡೆಯಾಯಿತು. ಈ ಎರಡೂ ರಾಜ್ಯಗಳು ಸಹ ದೇವರ ನಿಯಮವನ್ನು ಮೀರಿ ಅನ್ಯ ದೇವತೆಗಳನ್ನು ಸೇವಿಸಿದರು, ಅವರು ತಮ್ಮ ಮಾರ್ಗಗಳನ್ನು ಬದಲಿಸದೆ ಹೋದರೆ ನಾಶನವು ಬರುವದೆಂದು ದೇವರು ಅನೇಕ ಪ್ರವಾದಿಗಳ ಮೂಲಕ ಎಚ್ಚರಿಸಿದನು.

ಕ್ರಿಸ್ತ ಪೂರ್ವ ಎಂಟರ ಅಂತ್ಯದಲ್ಲಿ ಯೆಶಾಯನು ಯೆರೂಸಲೇಮಿನ ಹಾಗೂ ಯೆಹೂದದವರಿಗೆ ಪ್ರವಾದನಾ ವಾಕ್ಯವನ್ನು ಪ್ರಕಟಿಸಿದನು (ಯೆಶಾಯ 1:1), ಅದು ದಾವೀದನ ಆಳ್ವಿಕೆಯ ಎರಡು ನೂರು ಶತಮಾನಗಳ ನಂತರವಾದ ಕಾರ್ಯವಾಗಿದೆ. ಕ್ರಿ.ಪೂ. 722/721 ರಲ್ಲಿ ಅಶ್ಶೂರ್ಯರು ಉತ್ತರ ಪ್ರಾಂತವನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ, ಇಸ್ರಾಯೇಲ್ಯರ ಇತಿಹಾಸದಲ್ಲಿ ಅಸಮಾಧಾನದ ಸಮಯವಾಗಿತ್ತು. ಈಗ ದಕ್ಷಿಣದ (ಯೆಹೂದ) ರಾಜ್ಯದ ಭವಿಷ್ಯವು ಅನಿಶ್ಚಿತವಾಗಿತ್ತು.

ಯೆಹೂದ್ಯದವರು ದೇವರ ಧರ್ಮಶಾಸ್ತ್ರವನ್ನು ನಿರಾಕರಿಸಿದ್ದರಿಂದ ಆತನು ನಾಶನದ ಯೋಜನೆಯನ್ನು ಅವರ ಮೇಲೆ ತಂದನು. ಆ ನಾಶನವು ಕ್ರಿ.ಪೂ. 586ರಲ್ಲಿ ಜರುಗಿತು, ಬಾಬಿಲೋನಿಯದವರು ಇಸ್ರಾಯೇಲ್ಯರ ಮೇಲೆ ಜಯಗಳಿಸಿದಾಗ, ಸೊಲೋಮೋನನು ನಿರ್ಮಿಸಿದ್ದ ದೇವಾಲಯವನ್ನು ನಾಶಮಾಡಿ, ಅನೇಕ ಇಸ್ರಾಯೇಲ್ಯರನ್ನು ಬಾಬೇಲಿಗೆ ಸೆರೆಯಾಗಿ ಒಯ್ದರು.

ನಾವು ಯೆಶಾಯ 40 ನ್ನು ನೋಡುವಾಗ, ಹಿಂದಿನ ಅಧ್ಯಾಯಗಳಿಗಿಂತಲೂ ವಿಭಿನ್ನ ವಾದ ಶೈಲಿಯನ್ನು ಗಮನಿಸುತ್ತೇವೆ. ಯೆಶಾಯ 40:1ರಲ್ಲಿ, "ನನ್ನ ಜನರನ್ನು ಸಂತೈಸಿರಿ, ಸಂತೈಸಿರಿ, ಯೆರೂಸಲೇಮಿನ ಸಂಗಡ ಹೃದಯಂಗಮವಾಗಿ ಮಾತಾಡಿರಿ," ಯೆಶಾಯನ ಉಳಿದ ಭಾಗದಲ್ಲಿ, ದೇವರು ತಾನು ಆಯ್ಕೆ ಮಾಡಿಕೊಂಡ ಜನರನ್ನು ನಿಧಾನವಾಗಿ ಪುನಃ ಸ್ಥಾಪಿಸಿದ ಸಂಗತಿಗಳನ್ನು ನೋಡುತ್ತೇವೆ.

## ಪ್ರವಾದನೆಯ ವಿಷಯ: ಬಾಧೆಗೊಳಗಾದ ಸೇವಕ

ಯೆಶಾಯನು ತಿಳಿಸಿದ ಈ "ಸಂತೈಸುವಿಕೆಯು" ಒಬ್ಬ ನಿರ್ದಿಷ್ಟವಾದ "ಸೇವಕನ" ಮೂಲಕ ಉಂಟಾಗುವದಿತ್ತು, ಇಸ್ರಾಯೇಲ್ಯರು ಸೋತುಹೋದ ವಿಚಾರಗಳನ್ನು ಆ ಸೇವಕನು ಸುಗಮ ಮಾಡಿ, ಅವರ ಪುನಃ ಸ್ಥಾಪನೆಯ ಸಂಗತಿಗೆ ಸಾಧನವಾದನು. "ಸೇವಕನ ಹಾಡು" ಎಂಬ ವ್ಯಾಖ್ಯಾನದಲ್ಲಿ ಈ ಸೇವಕನೇ ಮುಖ್ಯಾ ಕೇಂದ್ರ ಬಿಂದುವಾಗಿದ್ದಾನೆ. ಯೆಶಾಯ 42:1-4; 49:1-13; 50:4-11; ಮತ್ತು 52:13-53:12 ಅದರಲ್ಲಿರುವ ಕಡೇಯ ಭಾಗವನ್ನು ಅಪೊಸ್ತಲರ ಕೃತ್ಯಗಳು 8ರಲ್ಲಿ, ಐಥಿಯೋಪಿಯದವನು ಓದುತ್ತಿದ್ದನು.

ವಿಶೇಷವಾಗಿ, ಯೆಶಾಯ 53 ಆ ಸೇವಕನ ಬಾಧೆಗಳ ಘಟನೆಯನ್ನು ವಿವರಿಸುತ್ತದೆ: ಆತನು ದೇವರಿಂದ ಕಳುಹಿಸಲ್ಪಟ್ಟಿದ್ದರೂ, ಆತನ ಜನರೇ ಆತನನ್ನು ತಿರಸ್ಕರಿಸಿದರು. ಆತನು ಪೂರ್ಣವಾಗಿ ಧಿಕ್ಕರಿಸಲ್ಪಟ್ಟನು, ಆತನಿಗೆ ಜನರು ಯಾವ ವಿಧವಾದ ಗೌರವವನ್ನು ಸಲ್ಲಿಸಲಿಲ್ಲ - ಆದರೆ ಈ ಎಲ್ಲಾ ಬಾಧೆಗಳ ನಡುವೆಯೂ, ಆಶ್ಚರ್ಯವಾದ ಘಟನೆಗಳು ಜರುಗಿದವು. ಇತರರ

ತಪ್ಪಿಗಾಗಿ ಆತನು ಬಾಧೆಪಡುತ್ತಿದ್ದನು. ಈ ಪ್ರವಾದಿಗೆ ಅನುಗುಣವಾದ, ಈ ಸಂಗತಿಗಳು, ದೇವರ ಯೋಜನೆಗನುಗುಣವಾಗಿಯೇ ಇದ್ದವು. ಅವುಗಳು ಜನರ ರಕ್ಷಣೆಯ ನಿಮಿತ್ತವಾಗಿಯೇ ಉಂಟಾಗಿದ್ದವು. ಆತನ ನಂಬಿಗಸ್ತಿಕೆಯ ವಿಧೇಯತೆಯ ನಿಮಿತ್ತ, ಆ ಸೇವಕನು ಉನ್ನತ ಸ್ಥಿತಿಗೆ ಏರಿಸಲ್ಪಟ್ಟನು.

ಹೊಸ ಒಡಂಬಡಿಕೆಯ ಬರಹಗಾರರು ಯೆಶಾಯ 53ನ್ನು ಯಾವುದೇ ಅಭ್ಯಾಂತರವಿಲ್ಲದೆ ಅದು ಯೇಸುವಿನ ಹಾಗು ಆತನ ಬಾಧೆಗಳೇ ಎಂದು ತಿಳಿದುಕೊಂಡರು. ಹೊಸ ಒಡಂಬಡಿಕೆಯ ಆಲೋಚನೆಯಂತೆ, ಇಸ್ರಾಯೇಲ್ಯರ ಅಂತಿಮವಾದ ಬಿಡುಗಡೆಯು ಸೈನ್ಯ ಶಕ್ತಿಯಿಂದಾಗಲೀ ಅಥವಾ ರಾಜಕೀಯ ವಿದ್ಯಾಮಾನಗಳಿಂದಾಗಲಿ ಉಂಟಾಗಲು ಅಸಾಧ್ಯವಾಗಿತ್ತು, ಆದರೆ ದೇವರ ಮಗನಾದ ಆ ಸೇವಕನ ಬಾಧೆಗಳ ಮೂಲಕವೇ ಆಗುವದಿತ್ತು, ಹಾಗೂ, ಇಸ್ರಾಯೇಲ್ಯರಿಗೆ ಮಾತ್ರ ಆತನು ರಕ್ಷಕನಾಗಿರದೆ, ಎಲ್ಲಾ ಜನಾಂಗಗಳಿಗೂ ರಕ್ಷಕನಾಗಿದ್ದನು - ಆ "ರಕ್ಷಣೆಯಲ್ಲಿ" ದೈಹಿಕವಾದ ಹಾಗೂ ಆತ್ಮೀಕವಾದ ಬಿಡುಗಡೆಯೂ ಅಡಕವಾಗಿತ್ತು. ಇಸ್ರಾಯೇಲ್ಯರು ಆ ಸೇವಕನ ಗುರುತನ್ನು ಕಂಡು ಹಿಡಿಯಲು ಆಗದಿದ್ದರೂ, ಹೊಸ ಒಡಂಬಡಿಕೆಯ ಬರಹಗಾರರು ಆ ಸೇವಕನು "ಯೇಸುವೇ" ಎಂದು ನಿರ್ಧರಿಸಿದರು.

ಉದಾಹರಣೆ: ಮತ್ತಾಯ 8:14-17ರಲ್ಲಿ ಯೇಸು ಪೇತ್ರನ ಅತ್ತೆಯನ್ನು ವಾಸಿ ಮಾಡಿದ ವಿಚಾರದಲ್ಲಿ "ಇದರಿಂದ - ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತುಕೊಂಡನು ಎಂದು ಯೆಶಾಯನೆಂಬ ಪ್ರವಾದಿಯಿಂದ ಹೇಳಿರುವ ಮಾತು ನೆರವೇರಿತು" ಎಂದು ಬರೆಯಲ್ಪಟ್ಟಿದೆ. ಅದು ಯೆಶಾಯ 53:4ರ ಉಲ್ಲೇಖವಾಗಿದೆ. ಅದೇ ರೀತಿಯಲ್ಲಿ, ಯೆಹೂದ್ಯರು ಯೇಸುವಿನ ಸೂಚಕ ಕಾರ್ಯಗಳನ್ನು ನಂಬದೆ ಇರುವ ಸಂದರ್ಭದಲ್ಲಿ, ಯೋಹಾನನು ಯೆಶಾಯ 53:1ರ ಉಲ್ಲೇಖವನ್ನು ಮಾಡಿ, "ನಾವು ಕೇಳಿದ ಸಂಗತಿಯನ್ನು (ನಮ್ಮಲ್ಲಿ) ಯಾರು ನಂಬಿದರು? ಎಂದನು" (ಯೋಹಾನ 12:36ಬಿ-41). ಕ್ರೈಸ್ತರು ಕ್ರಿಸ್ತನಿಗಾಗಿ ಬಾಧೆಪಡ ಬೇಕು ಎಂದು ಪೇತ್ರನು ತಿಳಿಸಿ, ಯೆಶಾಯ 53ರ ವಚನವನ್ನು ಸಂಕ್ಷಿಪ್ತವಾಗಿ ತಿಳಿಸಿರವನು "ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನು ಅನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು" (1 ಪೇತ್ರ 2:21). ಯೇಸುವಿನ ಹಾಗು ಆತನ ಬರೋಣದ ಸಂಗತಿಯನ್ನು ಹಳೇ ಒಡಂಬಡಿಕೆಯ ಪ್ರವಾದಿಗಳು ಪ್ರತಿಪಾದಿಸಿರುವದರಿಂದ, ಯೆಶಾಯ 53 ಪ್ರಮುಖ ವಾಕ್ಯಭಾಗವಾಗಿದೆ.

## ಆತನ ಪುನರುತ್ಥಾನ (53:1-3)

ಯೇಸು ಕ್ರಿಸ್ತನು ನಿಂಧನೆಗೊಳಗಾಗುವನು ಎಂದು ಯೆಶಾಯ ಗ್ರಂಥದಲ್ಲಿ ಮುಂತಿಳಿಸಲಾಗಿದೆ. ಮೊದಲ ಮೂರು ವಚನಗಳಲ್ಲಿ ಆತನ ನಿರಾಕರಣೆಯ ಕುರಿತು ತಿಳಿಸಲಾಗಿದೆ. ವಚನ 1 ರಲ್ಲಿ, "ನಾವು ಕೇಳಿದ ಸಂಗತಿಯನ್ನು ಯಾರು ನಂಬಿದರು?" ಎಂದಿದೆ. ಸಹಜವಾದ ಉತ್ತರವನ್ನು ಹೊಂದಿರುವ ಆಶ್ಚರ್ಯಕರವಾದ ಪ್ರಶ್ನೆಯಾಗಿದೆ. ಅದೇನೆಂದರೆ "ಅನೇಕರು" ನಂಬಲಿಲ್ಲ. ಪ್ರಕಟವಾದ ಸಂದೇಶವನ್ನು ಕೇವಲ ಕೇವಲ ಯೆಹೂದ್ಯರು ನಂಬಿದರು ಎಂದು ರೋಮಾಪುರ 10:16ರಲ್ಲಿ ಉಲ್ಲೇಖವಾಗಿದೆ. ಯೆಶಾಯ 53:2 ರಲ್ಲಿ, "ಅವನಲ್ಲಿ ಯಾವ ಅಂದ ಚಂದಗಳೂ ಇರಲಿಲ್ಲ" ಎಂಬುದಾಗಿದ್ದು, ವಚನ 2ರಲ್ಲಿ ಯೇಸು ಕ್ರಿಸ್ತನು ಸಹ ದೈಹಿಕವಾದ ಅಂದ ಚಂದಗಳನ್ನು ಹೊಂದಿರಲಿಲ್ಲ ಎಂಬ ಸೂಚನೆಯನ್ನು ಹೊಂದಿರಲಿಲ್ಲ ಎಂದಿದ್ದರೂ, ಆತನ ಸಮಕಾಲಿನವರು ಆತನಲ್ಲಿ ಯಾವ "ವಿಶೇಷತೆ" ಇಲ್ಲದೆ ಇದ್ದದ್ದರಿಂದ "ಆತನನ್ನು ಗಣನೆಗೆ ತಾರಲಿಲ್ಲ ಎಂಬ ಕಾರಣವನ್ನು ನೀಡಿರುವರು." ವಚನ 3ರಲ್ಲಿ "ಅವನು ಧಿಕ್ಕರಿಸಲ್ಪಟ್ಟವನು, ಮನುಷ್ಯರು ಸೇರಿಸಿಕೊಳ್ಳದವನು, ಸಂಕಟಪಡುವವನು," ಎಂದು ಹೇಳಲ್ಪಟ್ಟಿದೆ.

ಹೊಸ ಒಡಂಬಡಿಕೆಯು ತಿಳಿಸಿರುವ ಸಂಗತಿಗಳು ಯೇಸುವಿನಲ್ಲಿ ಸತ್ಯವಾಗಿವೆ: ಯೆಹೂದ್ಯರಿಗಾಗಿಯೇ ಬಂದಂಥ ಮೆಸ್ಸೀಯನನ್ನು ಹೆಚ್ಚಿನ ಯೆಹೂದ್ಯರು ಸ್ವೀಕರಿಸಲಿಲ್ಲ. ಯೋಹಾನನ ಸುವಾರ್ತೆಯಲ್ಲಿ, "ತಿರಸ್ಕಾರ" ಎಂಬುದೇ ಪ್ರಮುಖ ಪ್ರಸ್ತಾಪವಾಗಿದೆ:

> ನಿಜವಾದ ಬೆಳಕು ಲೋಕಕ್ಕೆ ಬರುವದಾಗಿತ್ತು; ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು ಕೊಡುವಂಥದು. ಆತನು ಲೋಕದಲ್ಲಿ ಇದ್ದನು; ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು; ಆದರೂ ಲೋಕವು ಆತನನ್ನು ಅರಿಯಲಿಲ್ಲ. ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು; ಆದರೆ ಸ್ವಂತಜನರು ಆತನನ್ನು ಅಂಗೀಕರಿಸಲಿಲ್ಲ (ಯೋಹಾನ 1:9-11).

ಈಗಲೂ ಸಹ ಈ ತಿರಸ್ಕಾರವನ್ನು ಗಮನಿಸುತ್ತೇವೆ! ಸಮಯದಲ್ಲಿ, ಬಾಧೆಗೊಳಗಾದ ಯೇಸು, ಸ್ವಾರ್ಥಿಗಳಿಗೂ, ಸ್ವ-ಸೇವೆ ಮಾಡಿಕೊಳ್ಳುವವರಿಗೂ, ಮಾನಸಿಕವಾಗಿರುವವರಿಗೂ ಸಂಕುಚಿತ ಸ್ವಭಾವದವರಿಗೂ ಮನವಿಯನ್ನು ಮಾಡುವದಿಲ್ಲ. ಈ ಸ್ವಭಾವದರು ಪ್ರಚಲಿತವಾಗಿರುವರು; ಆದ್ದರಿಂದ ಅನೇಕ ಜನರು ಆತನನ್ನು ಈ ದಿನಗಳಲ್ಲೂ ತಿರಸ್ಕರಿಸುವರು. ಆತನು ಈ ಲೋಕಕ್ಕೆ ಐಶ್ವರ್ಯವಂತನಾಗಿ ಬಂದನೋ, ಶ್ರೀಮಂತನಾದ ವ್ಯಾಪಾರದ ನಾಯಕನಾಗಿ ಬಂದನೋ, ಕುಶಲತೆಯ ಆಟಗಾರನಾಗಿ ಬಂದನೋ, ಅಥವಾ ಮನರಂಜನೆಯವನಾಗಿ ಬಂದನೋ, ಹೌದು ಆತನು ಅನೇಕರನ್ನು ಆಕರ್ಷಿಸಿರುವನು, ಆದಾಗ್ಯೂ, ಯೆಶಾಯ 53ರಲ್ಲಿನ ಬಾಧೆಗೊಳಗಾದ ಸೇವಕನು, ಇತಿಹಾಸದಲಿದ್ದದಕ್ಕಿಂತಲೂ ಪ್ರಚಲಿತವಾಗಿ ಪ್ರಖ್ಯಾತಿಗೊಂಡಿರುವನು.

## ಆತನ ವ್ಯಥೆಯುಳ್ಳ ಬಾಧೆಗಳು (53:4-6)

ಇತರರಿಗಾಗಿಯೂ ಯೇಸು ಬಾಧೆಗಳನ್ನು ಅನುಭವಿಸಿದನು ಎಂದು ಯೆಶಾಯ 53 ರಲ್ಲಿ ತಿಳಿಸುತ್ತದೆ. ವಚನ 4-6ರಲ್ಲಿ ಆ ಸೇವಕನು ಇತರರಿಗಾಗಿ ಬಾಧೆಪಟ್ಟನು ಎಂಬುದಾಗಿದೆ. ಅದರಲ್ಲಿ ಪ್ರವಾದಿಯು ಸಹ ಒಳಗೊಂಡಿರುವನು. ಈ ವಚನಗಳಲ್ಲಿ "ನಾವು" "ನಮ್ಮ" ಮತ್ತು ನಮಗೆ ಎಂದು ಹತ್ತು ಬಾರಿ ಉಲ್ಲೇಖವಾಗಿದೆ. ನಿಜವಾಗಿಯೂ ನಮ್ಮ ವ್ಯಾಧಿಗಳನ್ನು ಅನುಭವಿಸಿದನು; ಅವನು ಹೊತ್ತ ಹೊರೆಯು ನಮ್ಮ ಸಂಕಟವೇ ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು ... ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು. ವೇದಾಂತ ಪರಿಣಿತರುಗಳು, ಯೇಸುವಿನ ಬಾಧೆಗಳನ್ನು "ಇತರರಿಗಾಗಿ ಅನುಭವಿಸಿದ ವ್ಯಥೆ" ಎಂದು ಕರೆದಿರುವರು. ಅಂದರೆ ಯೇಸು ನಮ್ಮ ಅಪರಾಧಗಳನ್ನು ಹೊತ್ತುಕೊಂಡನು ಎಂಬ ಅರ್ಥವಾಗಿದೆ ಆತನು ಬಾಧೆಗಳನ್ನು, ಹಾಗೂ ಶಿಲುಬೆಯ ಮರಣವನ್ನು, ನಮ್ಮ ಅಪರಾಧದ ನಿಮಿತ್ತ ತಾನೇ ಅನುಭವಿಸಿದನು.

ಲೋಕದ ಪಾಪದ ನಿವಾರಣೆಗಾಗಿಯೇ, ಉಂಟಾದ ಶಿಲುಬೆಯ ಅನುಭವವನ್ನು ಹೊಸ ಒಡಂಬಡಿಕೆಯು ತಿಳಿಸುತ್ತದೆ:

> ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು (1 ಪೇತ್ರ 2:24).

> ನನ್ನ ಪ್ರಿಯರಾದ ಮಕ್ಕಳೇ, ನೀವು ಪಾಪಮಾಡದಂತೆ ಈ ಮಾತುಗಳನ್ನು ನಿಮಗೆ ಬರೆಯುತ್ತೇನೆ. ಯಾವನಾದರೂ ಪಾಪಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತೆಂಬ ಸಹಾಯಕನು ನಮಗಿದ್ದಾನೆ ಆತನು ನಮ್ಮ ಪಾಪಗಳನ್ನು ನಿವಾರಣಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ,

ಸಮಸ್ತ ಲೋಕದ ಪಾಪಗಳನ್ನೂ ನಿವಾರಣ ಮಾಡುತ್ತಾನೆ (1 ಯೋಹಾನ 2:1, 2).

ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ. ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿಬರುತ್ತದೆ. ಪ್ರೀಯರೇ, ದೇವರು ನಮ್ಮನ್ನು ಹೀಗೆ ಪ್ರೀತಿಸಿದ ಮೇಲೆ ನಾವು ಒಬ್ಬರನ್ನೊಬ್ಬರು ಪ್ರೀತಿಸುವ ಹಂಗಿನಲ್ಲಿದ್ದೇವೆ (1 ಯೋಹಾನ 4:9-11).

ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು. ನೀತಿವಂತನಿಗೋಸ್ಕರ ಯಾರಾದರೂ ಪ್ರಾಣಕೊಡುವದು ಅಪರೂಪ. ಉಪಕಾರಿಗೋಸ್ಕರ ಪ್ರಾಣಕೊಡುವದಕ್ಕೆ ಯಾವನಾದರೂ ಧೈರ್ಯಮಾಡಿದರೂ ಮಾಡಾನು. ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ. ಈಗ ನಾವು ಆತನ ರಕ್ತದಿಂದ ನೀತಿ ವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವದು ಮತ್ತು ನಿಶ್ಚಯವಲ್ಲವೇ (ರೋಮಾಪುರ 5:6-9).

ಸುವಾರ್ತೆಯ ಈ ಸಂದೇಶವು ನಮ್ಮ ಹೃದಯಗಳನ್ನು ಸ್ಪರ್ಶಿಸಬೇಕು: ಕ್ರಿಸ್ತನು ಬಾಧೆಪಟ್ಟು ನಿಮಗಾಗಿ ಸತ್ತನು ಎಂಬುದು ಸತ್ಯಸಂಗತಿಯಾಗಿದೆ. ಈ ಅಂಶವನ್ನು "ವ್ಯಕಿಗತ" ಮಾಡಲು, ಯೆಶಾಯ 53ನ್ನು ಏಕವಚನದಲ್ಲಿ ಬಳಸಬಹುದು: "ನಿಜವಾಗಿಯೂ ನನ್ನ ವ್ಯಾಧಿಗಳನ್ನು ಅನುಭವಿಸಿದನು, ನನ್ನ ಸಂಕಟದ ಹೊರೆಯನ್ನು ಹೊತ್ತನು … ನನ್ನ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನನ್ನ ಅಪರಾಧದ ನಿಮಿತ್ತ ಅವನು ಜಜ್ಜಲ್ಪಟ್ಟನು. ನನಗೆ ಸೂಕ್ಷೇಮವನ್ನುಂಟು ಮಾಡುವ ದಂಡನೆಯನ್ನು ಅನುಭವಿಸಿದನು. ಅವನ ಬಾಸುಂಡೆಗಳಿಂದ ನನಗೆ ಗುಣವಾಯಿತು."

## ಆತನನ್ನು ಕೆಟ್ಟ ರೀತಿಯಲ್ಲಿ ನಡೆಸಿಕೊಂಡರು (53:7-9)

ಯೇಸು ಅನ್ಯಾಯವಾಗಿ ಬಾಧೆಯನ್ನು ಅನುಭವಿಸಿದನು ಎಂದು ಯೆಶಾಯನು ತಿಳಿಸಿರುವನು. ವಚನ 7-9ರಲ್ಲಿ ಇತರರಿಗಾಗಿ ಆ ಸೇವಕನು ಬಾಧೆಗಳನ್ನು ಅನುಭವಿಸಿದನು ಎಂದು ತೋರಿಸುತ್ತದೆ. ಅವನು ಖಿನ್ನನಾಗಿ ಸಂಕಟಪಟ್ಟನು, ಇದಕ್ಕೆ ಆತನಲ್ಲಿ ಯಾವ ತಪ್ಪುಗಳೂ ಇರಲಿಲ್ಲ ಎಂದು ಯೆಶಾಯನು ಹೇಳಿರುವನು. ವಚನ 7 ಆತನ ಸ್ವಯಂ ಸ್ವಭಾವದ ಯಜ್ಞವನ್ನು ತೋರುತ್ತದೆ: "ಆತನು ಬಾಧೆ ಅನುಭವಿಸುವಾಗ" ಬಾಯಿ ತೆರೆಯಲೇ ಇಲ್ಲ, ಆತನು ಅದಕ್ಕೆ ಪ್ರತಿರೋಧ ತೋರಲಿಲ್ಲ. ಆತನ ಜೀವವನ್ನು ಆತನಿಂದ ತೆಗೆಯಲಾಯಿತು, ಮತ್ತು ಒಂದು ಹೀನವಾದ ಹೂಣಿಡುವಿಕೆ ಅವನಿಗೆ ಉಂಟಾಯಿತು. "ಅವನು ಯಾವ ಅನ್ಯಾಯವನ್ನು ಮಾಡದಿದ್ದರೂ ಬಾಯಲ್ಲಿ ಯಾವ ವಂಚನೆಯೂ ಉಂಟಾಗಲಿಲ್ಲ" (53:9ಬಿ; ESV).

ರೋಮಾಯದ ಅಧಿಪತಿಯಾದ ಪಿಲಾತನ ಮುಂದೆ ಆತನ ವಿಚಾರಣೆಯು ನಡೆದಾಗಲೂ ಆತನು ಮುಗ್ಧನಾಗಿದ್ದನು ಎಂದು ಲೂಕನ ಸುವಾರ್ತೆಯಲ್ಲಿ ನೋಡುತ್ತೇವೆ. ಮಹಾಯಾಜಕರುಗಳು ಹಾಗೂ ಅವರ ಅನುಯಾಯಿಗಳು ಆತನಿಗೆ ವಿರೋಧವಾಗಿ ಮಾತನಾಡುವಾಗಲೂ, "ನನಗೆ ಯಾವ ಅಪರಾಧವು ಕಾಣಿಸುವದಿಲ್ಲ" ಎಂದು ಪಿಲಾತನು ಹೇಳಿದನು (ಲೂಕ 23:4). ನಂತರದಲ್ಲಿ, ಯೇಸುವನ್ನು ಹೆರೋದನ ಬಳಿಗೆ ಕಳುಹಿಸಲಾಗಿ, ಪಿಲಾತನು ಮಹಾಯಾಜಕರ ಬಳಿಯಲ್ಲಿ ಚರ್ಚಿಸಿ ವರದಿ ನೀಡಿದನು,

ತರುವಾಯ ಪಿಲಾತನು ಮಹಾಯಾಜಕರನ್ನೂ ಅಧಿಕಾರಿಗಳನ್ನೂ ಪ್ರಜೆಗಳನ್ನೂ ಒಟ್ಟಾಗಿ ಕರಸಿ ಅವರಿಗೆ - ಈ ಮನುಷ್ಯನು ಪ್ರಜೆಗಳನ್ನು ತಿರುಗಿ ಬೀಳುವಂತೆ ಮಾಡುವವನು ಎಂದು ಇವನನ್ನು ನನ್ನ ಬಳಿಗೆ ತಂದಿರಲ್ಲಾ; ನೀವು ಇವನ ಮೇಲೆ ತಂದ ದೂರುಗಳ ವಿಷಯವಾಗಿ ನಾನು ನಿಮ್ಮ ಮುಂದೆಯೇ ವಿಚಾರಣೆ ಮಾಡಿದರೂ ಇವನಲ್ಲಿ ಒಂದು ತಪ್ಪಾದರೂ ನನಗೆ ಕಾಣಲಿಲ್ಲ. ಹೆರೋದ ನಿಗಾದರೂ ಕಾಣಲಿಲ್ಲ; ಅವನು ಇವನನ್ನು ಹಿಂತಿರುಗಿ ನಮ್ಮ ಬಳಿಗೆ ಕಳುಹಿಸಿದನಲ್ಲಾ. ಇವನು ಮರಣದಂಡನೆಗೆ ಯೋಗ್ಯವಾದದ್ದೇನೂ ಮಾಡಿದವನಲ್ಲವೆಂದಾಯಿತು. ಆದದರಿಂದ ನಾನು ಇವನನ್ನು ಹೊಡಿಸಿ ಬಿಟ್ಟುಬಿಡುತ್ತೇನೆ ಎಂದು ಹೇಳಿದನು (ಲೂಕ 23:13-16).

ಬರಬ್ಬನನ್ನು ಬಿಡುಗಡೆ ಮಾಡಿ ಯೇಸುವನ್ನು ಶಿಲುಬೆಗೆ ಹಾಕಿರಿ ಎಂದು ಯೆಹೂದ್ಯ ನಾಯಕರು ಮನವಿ ಮಾಡಿದಾಗ, ಪಿಲಾತನು ಆಶ್ಚರ್ಯ ಭರಿತನಾಗಿ, "ಈ ಮನುಷ್ಯನು ಮಾಡಿರುವ ತಪ್ಪಾದರೂ ಏನು? ಮರಣದ ಶಿಕ್ಷೆಗೆ ಆತನಲ್ಲಿ ಯಾವ ತಪ್ಪು ಇರುವದಿಲ್ಲ; ಆದ್ದರಿಂದ ಇವನನ್ನು ಹೊಡಿಸಿ ಬಿಡುತ್ತೇನೆ ಎಂದು ಅವರಿಗೆ ಹೇಳಿದನು" (ಲೂಕ 23:22). ಆದರೆ ಪಿಲಾತನು ಅವರ ಒತ್ತಡಕ್ಕೆ ಮಣಿದವನಾಗಿ ಕೊಲೆಗಾರನಾದ ಬರಬ್ಬನನ್ನು ಬಿಡುಗಡೆ ಮಾಡಿ, ಯೇಸುವನ್ನು ಶಿಲುಬೆಗೆ ಹಾಕಲು ಒಪ್ಪಿಸಿದನು.

ಇದನ್ನು ನಾವುಗಳು ಓದುವಾಗ, ಅನ್ಯಾಯವು ನಡೆಯಿತು ಎಂದು ತಿಳಿಯುತ್ತೇವೆ. ಅ ಅಂಶವು ಸತ್ಯವಾದದ್ದೆ! ಯಾಕೆಂದರೆ ಅದು ನೀತಿಗಾಗಿ ಆದ "ರಕ್ಷಣೆಯಲ್ಲ"; ಅದು ಕರುಣೆಯಾಗಿದ್ದು, ನಾವು ಪಾಪಗಳಿಗಾಗಿ ಬಾಧೆಗಳನ್ನು ಅನುಭವಿಸಬೇಕು ಎಂಬ ನ್ಯಾಯ ವಾದ ಸಂಗತಿಯ ಕುರಿತಾಗಿರುತ್ತದೆ. ಶಿಲುಬೆಯ ನಿಮಿತ್ತವಾಗಿ ನಮಗೆ ರಕ್ಷಣೆ ಉಂಟಾಗಿದೆ. ಮರಣದಂಡನೆಗೆ ಕಾರಣವಾದ ಅಪರಾಧವನ್ನು ಯೇಸು ಮಾಡದೆ ಇದ್ದರೂ, ಆ ಭಾದೆಯನ್ನು ಅನುಭವಿಸಿದನು, ಮುಂದೆ ಆಗುವಂಥದ್ದನ್ನು ಯೆಶಾಯನು ಮುಂಚಿತವಾಗಿಯೇ ಕಂಡನು.

## ಆತನ ಮಹಿಮೆ (53:10-12)

ಯೆಶಾಯನ ಪ್ರಕಾರ, ಯೇಸುವಿನ ಬಾಧೆಗಳು ಮಹಿಮೆಗೆ ನಡೆಸಿದವು. ಅಧ್ಯಾಯ 53ರಲ್ಲಿ, ಯೇಸುವಿನ ಬಾಧೆಗಳನ್ನು ಸಮರ್ಥಿಸಲಾಗಿದೆ. ಕಡೆಯ ಮೂರು ವಚನಗಳ ನಡುವೆ ಭರವಸೆಯ ವಾಗ್ದಾನಗಳನ್ನು ನೀಡಲಾಗಿದೆ:

ಅವನನ್ನು ಜಜ್ಜುವದು ಯೆಹೋವನ ಸಂಕಲ್ಪ ವಾಗಿತ್ತು.
ಆತನು ಅವನನ್ನು ವ್ಯಾಧಿಯಿಂದ ಬಾಧಿಸಿ ಹೀಗೆಂದುಕೊಂಡನು
ಇವನು ತನ್ನ ಆತ್ಮವನ್ನು ಪ್ರಾಯಶ್ಚಿತ್ತಯಜ್ಞ ಕ್ಕಾಗಿ ಒಪ್ಪಿಸಿದ ಮೇಲೆ
ತನ್ನ ಸಂತಾನವನ್ನು ನೋಡುವನು, ಚಿರಂಜೀವಿಯಾಗುವನು,
ನನ್ನ ಸಂಕಲ್ಪವು ಇವನ ಕೈಯಿಂದ ನೆರವೇರು ವದು;
ತನ್ನ ಆತ್ಮವು ಅನುಭವಿಸಿದ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು;
ಧರ್ಮಾತ್ಮನಾದ ನನ್ನ ಸೇವಕನು ತನ್ನ ಜ್ಞಾನದ
ಮೂಲಕ
ಬಹು ಜನರನ್ನು ಧರ್ಮಮಾರ್ಗಕ್ಕೆ ತರುವನು;
ಅವರ ಅಪರಾಧಗಳನ್ನು ಹೊತ್ತುಕೊಂಡು ಹೋಗುವನು (ಯೆಶಾಯ 53:10ಬಿ-12).

ನಂತರದಲ್ಲಿ ರೋಮಾಪುರ 4:1-8ರಲ್ಲಿ ಪಾಲನು ಯೇಸುವಿನ ಬಾಧೆಗಳಲ್ಲಿ ಉಂಟಾದ ಪರಿಣಾಮಗಳನ್ನು ವಿವರಿಸಿರುವನು. ಯೇಸುವಿನಲ್ಲಿ ಭವಸವಿಡುವದರಿಂದ, ನಾವುಗಳು ನೀತಿವಂತರಾಗಿದ್ದೇವೆ. ನಾವು ಪಾಪಿಗಳಾಗಿ ಬಂದಿಸಲ್ಪಟ್ಟಿದ್ದರೂ ನೀತಿವಂತರಾಗಿದ್ದೇವೆ. ಯೆಶಾಯ 53 ಅಂತ್ಯದ ಮೂರು ವಚನಗಳಲ್ಲಿ, ಯೇಸುವಿನ ಪುನರುತ್ಥಾನದ ಕುರಿತು

ಪರೋಕ್ಷವಾಗಿ ತಿಳಿಸಲಾಗಿದೆ: ಅವನು ಜೀವಲೋಕದಿಂದ ಕೀಳಲ್ಪಟ್ಟಿದ್ದರೂ (53:8), ಅವನು ಮುಂದಿನ ತನ್ನ "ವಂಶವನ್ನು" ನೋಡುವನು. ವಚನ 11ರಲ್ಲಿ, "ತನ್ನ ಆತ್ಮವು ಅನುಭವಿಸಿದ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು. ಇವನು ಇಂಥವನಾಗಿರುವದರಿಂದ ನಾನು ಇವನಿಗೆ ದೊಡ್ಡವರ ಸಂಗಡ ಪಾಲು ಕೊಡುವೆನು" (53:12ಎ). ಇದು ಪೌಲನ ಫಿಲಿಪ್ಪಿ 2:9-11ಕ್ಕೆ ಹೋಲಿಕೆಯಾಗಿದೆ.

> ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯ ಪಾಲಿಸಿದ್ದಾನೆ. ಆದದರಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡ ಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು.

ಆದ್ದರಿಂದ ಯೇಸು ಶಿಲುಬೆಯ ಮೇಲೆ ಮರಣವನ್ನು ಅನುಭವಿಸುವನು ಎಂದು ಯೆಶಾಯನು ಮುಂತಿಳಿಸಿದ ಸಂಗತಿಯು ಸತ್ಯವಾಗಿದೆ. ಆತನ ಅನುಭವದ ವೇದನೆಯನ್ನು ಮಾತ್ರ ತಿಳಿಸದೆ, ಆತನು ನಮಗಾಗಿ ಸಾಧಿಸಿದ ಸಂಗತಿಯನ್ನು ಕಾಣುತ್ತೇವೆ.

---

## ಯೇಸು: ಪಾಪಕ್ಕಾಗಿ ಪರಿಪೂರ್ಣ ಪರಿಹಾರ

ಯೆಶಾಯ 53ರ ರಲ್ಲಿನ ಶ್ರಮೆ ಅನುಭವಿಸಿದ ಸೇವಕನ ಮುಗ್ಧತೆಯನ್ನು ಕುರಿತು ಹೊಸ ಒಡಂಬಡಿಕೆಯಲ್ಲಿ: ಯೇಸು ಪೂರ್ಣ ಮಾನವನಾಗಿದ್ದರೂ (ಪೂರ್ಣ ದೈವೀಕ; ಯೋಹಾನ 1:1; ಕೊಲೊಸ್ಸೆ 2:9; ಇಬ್ರಿಯ 1:8), ಪಾಪರಹಿತನಾಗಿದ್ದನು.

ನಾಲ್ವತ್ತು ದಿನಳ ಬಾಧೆಗಳನ್ನು ಅಡವಿಯಲ್ಲಿ ಹೊಂದಿದ ನಂತರ ಯೇಸುವಿನ ಸೇವೆಯು ಆರಂಭವಾಯಿತು, ಆತನು ಸೈತಾನನು ನೀಡಿದ ಅಧಿಕವಾದ ಬಾಧೆಯನ್ನು ಅನುಭವಿಸಿದನು (ಮತ್ತಾಯ 4:1-11; ಲೂಕ 4:1-13). ಪೌಲನು ಬರೆಯುವಾಗ ಪಾಪ ಅರಿಯದ ಆತನನ್ನು (ದೇವರು) ನಮಗಾಗಿ ಪಾಪವಾದನು, ಆತನ ಮೂಲಕ ದೇವರಿಗೆನಾವುಗಳು ನೀತಿವಂತರಾದೆವು (2 ಕೊರಿಂಥ 5:21). ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು ಅಂದರೆ "ಆತನು ಪಾಪ ಪ್ರಜ್ಞೆ ಹೊಂದಿದನು" ಎಂಬ ಅರ್ಥವಿಲ್ಲ. 1 ಯೋಹಾನ 3:5 "ಕ್ರಿಸ್ತನು ಪ್ರತ್ಯಕ್ಷನಾದನೆಂಬುದು ನಿಮಗೆ ಗೊತ್ತಾಗಿದೆ; ಆತನಲ್ಲಿ ಪಾಪವಿಲ್ಲ."

ಪ್ರತಿಕಾರವಿಲ್ಲದೆ, ಒಬ್ಬ ವಿಶ್ವಾಸಿಯು ಬಾಧೆಯನ್ನು ಅನುಭವಿಸಬೇಕು, ಪೇತ್ರನು ಇದರ ಕುರಿತು, "ಆತನು ಯಾವ ಪಾಪವನ್ನು ಮಾಡಲಿಲ್ಲ, ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ" (1 ಪೇತ್ರ 2:22).

ಪಾಪ ರಹಿತನಾದ ಯೇಸು ಎಂಬುದಾಗಿದೆ. ಇಬ್ರಿಯ 4:15: "ಯಾಕಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನುಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ."

ಆತನು ಪಾಪ ರಹಿತನಾದ್ದರಿಂದ, ಪರಿಪೂರ್ಣವಾದ ಯಜ್ಞವನ್ನು ಅರ್ಪಿಸಿದನು. "ಕರುಳುಗಳ ಮೇಲಣ ಎಲ್ಲಾ ಕೊಬ್ಬನ್ನೂ ಎರಡು ಹುರುಳಿಕಾಯಿಗಳನ್ನೂ ಇವುಗಳ ಮೇಲೆ ಸೊಂಟದಲ್ಲಿರುವ ಕೊಬ್ಬನ್ನೂ ಕಾಳಜದ ಹತ್ತಿರ ಹುರುಳಿ ಕಾಯಿಗಳ ತನಕ ಇರುವ ಕೊಬ್ಬನ್ನೂ ತೆಗೆದು ಯೆಹೋವನಿಗೆ ಹೋಮಮಾಡಬೇಕು" (ಯಾಜಕಕಾಂಡ 3; 4).